KATK900004862025

5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ತಿಪಟೂರು.

ಎಸ್.ಸಿ ಸಂಖ್ಯೆ: 10022/2025

ಪ್ರಮಾಣೀಕರಿಸಿದ ದಿನಾಂಕ: 16.02.2026

ಚಾಸಾ.3

ಫ್ರಾಸಾ.2

| | |
|---|---|
| ಹೆಸರು | ಪ್ರಕಾಶ್ |
| ತಂದೆಯ ಹೆಸರು | ಚಿಕ್ಕಣ್ಣ |
| ವಯಸ್ಸು | 49 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕಿಬ್ಬನಹಳ್ಳಿ |

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ:**

ನನಗೆ ಚಾಸಾ-1 ಮತ್ತು 2 ರವರ ಪರಿಚಯವಿರುತ್ತದೆ. ಚಾಸಾ-1 ಮತ್ತು 2 ರವರಿಗೆ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಮಂಜುನಾಥ ರವರಿಗೆ ಒಬ್ಬ ತಮ್ಮ ಇರುತ್ತಾನೆ, ಆತನ ಹೆಸರು ಆದರ್ಶ್ ಇರುತ್ತದೆ. ಸದರಿ ಆದರ್ಶ ರವರ ಹೆಂಡತಿಯ ಹೆಸರು ಪುಷ್ಪಾ ಇರುತ್ತದೆ. ಸದರಿ ಆದರ್ಶ ಹಾಗೂ ಪುಷ್ಪಾ ಇವರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ಪುಷ್ಪಾ ಇವರನ್ನು ನೋಡಿ ಗುರುತಿಸಿರುತ್ತಾರೆ

ಹಾಗೂ ನ್ಯಾಯಾಲಯದ ವಿ.ಸಿ ಮುಖಾಂತರ ಹಾಜರಿರುವ ಆದರ್ಶ ಇವರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿ 3 ಮತ್ತು 4 ಆರೋಪಿತರನ್ನು ನಾನು ಎಲ್ಲಿಯೂ ನೋಡಿರುವುದಿಲ್ಲ ಹಾಗೂ ಅವರ ಹೆಸರುಗಳು ನನಗೆ ತಿಳಿದಿರುವುದಿಲ್ಲ. ನನಗೆ ಚಾಸಾ-4 ಮಹೇಶ್ ರವರ ಪರಿಚಯವಿರುತ್ತದೆ. ಸದರಿ ಮಂಜುನಾಥ ಹಾಗೂ ಭವ್ಯ ಹಾಗೂ ಆದರ್ಶ ಹಾಗೂ ಪುಷ್ಪಾರವರ ನಡುವೆ ಘಟನೆ ನಡೆದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಚಾಸಾ-2 ಭವ್ಯರವರು 2-3 ತಿಂಗಳ ಹಿಂದೆ ಮೃತ ಪಟ್ಟಿರುತ್ತಾರೆ. ಸದರಿ ಭವ್ಯರವರು ಹುಷಾರಿಲ್ಲದೇ ಆಸ್ಪತ್ರೆಯಲ್ಲಿದ್ದು ಮೃತ ಪಟ್ಟಿರುತ್ತಾರೆ, ನಿಖರವಾದ ಕಾರಣ ನನಗೆ ತಿಳಿದಿರುವುದಿಲ್ಲ. ಸದರಿ ಭವ್ಯರವರಿಗೆ ತಲೆಗೆ ಹೇಗೆ ಹಾಗೂ ಯಾವಾಗ ಪೆಟ್ಟು ಬಿದ್ದಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

ನಮ್ಮ ತೋಟದ ಮನೆಯಿಂದ ಚಾಸಾ-1 ಮತ್ತು 2 ರವರ ಮನೆ ಹಾಗೂ ಆದರ್ಶ ರವರ ಮನೆ ಸುಮಾರು ಕಾಲು ಕಿ.ಮೀ ಅಂತರದಲ್ಲಿರುತ್ತದೆ. ಸದರಿ ಮಂಜುನಾಥ ಹಾಗೂ ಆದರ್ಶ ರವರು ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಸದರಿ ಚಾಸಾ-1 ಮತ್ತು ಆದರ್ಶ ರವರ ಸಂಬಂಧ ಚೆನ್ನಾಗಿ ಇತ್ತು. ನಾನು ಅವರ ಮನೆಗಳಿಗೆ ಯಾವಗಾದರು ಒಮ್ಮೆ ಹೋಗುತ್ತೇನೆ. ಸದರಿ ಒಂದು ದಾಖಲಾತಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲಾತಿಯನ್ನು **ನಿ.ಪಿ-14** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-14(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ ಆರು ತಿಂಗಳ ಹಿಂದೆ ನಾನು ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿರುತ್ತದೆ ಎಂದು

ನನಗೆ ತಿಳಿದಿರುವುದಿಲ್ಲ. ಸದರಿ ದಾಖಲಾತಿಗೆ ಕೆ.ಬಿ. ಕ್ರಾಸಿನ ಪೊಲೀಸರು ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲಾತಿಗೆ ನನ್ನೊಂದಿಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಸಹಿ ಮಾಡಿರುವ ದಾಖಲಾತಿಯಲ್ಲಿ ಏನು ಬರವಣಿಗೆ ಆಗಿರುತ್ತದೆ ಎಂದು ಓದಿ, ಕೇಳಿ, ತಿಳಿದುಕೊಂಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಯು ಒಂದು ಪೋಟೋದಲ್ಲಿ ತಾನು ಇರುವುದರ ಬಗ್ಗೆ ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋವನ್ನು **ನಿ.ಪಿ-15** ಎಂದು ಗುರುತಿಸಲಾಯಿತು. ಸದರಿ ಪೋಟೋವನ್ನು ಯಾರು ಹಾಗೂ ಎಲ್ಲಿ ತೆಗೆದಿರುತ್ತಾರೆ ಎಂದು ನೆನಪಿರುವುದಿಲ್ಲ. ಪೊಲೀಸರು ನನ್ನ ಯಾವುದೇ ಹೇಳಿಕೆ ಹಾಗೂ ಮರುಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಪೊಲೀಸರು ನನ್ನ ಆಡಿಯೋ-ವಿಡಿಯೋ ಹೇಳಿಕೆಯ ಚಿತ್ರೀಕರಣ ಮಾಡಿಕೊಂಡಿರುವುದಿಲ್ಲ. ನಾನು ಹತ್ತನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ 21.02.2025 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಇವರು ತಮ್ಮ ಕುಟುಂಬದ ಆಸ್ತಿಯನ್ನು ಇಬ್ಬರು ಮಕ್ಕಳು ಹಾಗೂ ತಂದೆ

ತಾಯಿಯರಿಗೆ ಭಾಗ ಮಾಡಿರುತ್ತಾರೆ. ಈ ಜಮೀನಿನ ವಿಚಾರವಾಗಿ ಹಿಂದಿನಿಂದ ಅಣ್ಣ ತಮ್ಮಂದಿರ ಮಧ್ಯೆ ಮನಸ್ತಾಪವಿದ್ದು, ಕೋರ್ಟನಲ್ಲಿ ಸಿವಿಲ್ ಕೇಸುಗಳು ನಡೆಯುತ್ತಿರುವ ವಿಚಾರ ತಿಳಿದಿರುತ್ತೆ ಹಾಗೂ ಆಗಾಗ ಅಣ್ಣ ತಮ್ಮಂದಿರ ಗಲಾಟೆಗಳಾಗುತ್ತಿದ್ದವು.

ದಿಃ 10.02.2025 ರಂದು ಸಂಜೆ ನಾನು ಮತ್ತು ನಮ್ಮ ಊರಿನ ವಾಸಿ ಮಹೇಶ ಬಿನ್ ಮಲ್ಲಿಕಾರ್ಜುನಯ್ಯ ಇಬ್ಬರು ತೋಟದ ಕಡೆಯಿಂದ ಊರಿನ ಕಡೆಗೆ ಬರುತ್ತಿದ್ದಾಗ--------- ಗಲಾಟೆ ಮಾಡಿರುವ ಆದರ್ಶ ಮತ್ತು ಅವನ ಹೆಂಡತಿ ಪುಷ್ಪಾವತಿಯವರನ್ನು ಹಾಗೂ ಆದರ್ಶ ಭವ್ಯರವರಿಗೆ ಹೊಡೆಯಲು ಬಳಸಿದ ದೊಣ್ಣೆಯನ್ನು ನೋಡಿದ್ದು, ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿ.ಪಿ-16** ಎಂದು ಗುರುತಿಸಲಾಯಿತು. ಸದರಿ ನಿ.ಪಿ-14 ರ ಅಡಿಯಲ್ಲಿ ಪೊಲೀಸರು ರಕ್ತ ಮಿಶ್ರಿತ ಮಣ್ಣು ಹಾಗೂ ಸಾದಾ ಮಣ್ಣನ್ನು ಅಮಾನತ್ತು ಪಡಿಸಿಕೊಂಡು ಅದನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ಗೆ ನಾನೇ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

**(ಸರ್ಕಾರಿ ಅಭಿಯೋಜಕರು ಅಮಾನತ್ತು ಪಡಿಸಿಕೊಂಡಿರುವ ವಸ್ತುವನ್ನು ಗುರುತಿಸಲು ಅನುಮತಿ ಕೋರಿದ್ದು, ಸದರಿ ಅಮಾನತ್ತು ಪಡಿಸಿಕೊಂಡ ವಸ್ತು ಬಿಳಿ ಬಟ್ಟೆ ಚೀಲದಲ್ಲಿ ಸೀಲ್ ಆಗಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಅದನ್ನು ತೆರೆದು ಸಾಕ್ಷಿಗೆ ತೋರಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

1. ಕೃತ್ಯ ನಡೆದ ಸ್ಥಳದಲ್ಲಿ ಶೇಖರಿಸಿದ ರಕ್ತ ಮಿಶ್ರಿತ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಅದನ್ನು ನ್ಯಾಯಾಲಯದ ಗುರುತಿಗಾಗಿ **ಮುದ್ದೆಮಾಲು-4** ಎಂದು ಗುರುತಿಸಲಾಯಿತು.

2. ಕೃತ್ಯ ನಡೆದ ಸ್ಥಳದಲ್ಲಿ ಶೇಖರಿಸಿದ ರಕ್ತ ಮಿಶ್ರಿತ ಇಲ್ಲದ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಅದನ್ನು ನ್ಯಾಯಾಲಯದ ಗುರುತಿಗಾಗಿ **ಮುದ್ದೆಮಾಲು–5** ಎಂದು ಗುರುತಿಸಲಾಯಿತು.

3.ಸಾಕ್ಷಿಗೆ ಒಂದು ಕಾಡು ಮರದ ಒಂದೇ ದೊಣ್ಣೆಯ ನಾಲ್ಕು ಪೀಸುಗಳನ್ನು ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದಿಲ್ಲ. ನ್ಯಾಯಾಲಯದ ಗುರುತಿಗಾಗಿ ಸದರಿ ದೊಣ್ಣೆಯ ಪೀಸುಗಳನ್ನು ಒಟ್ಟಾಗಿ **ಮುದ್ದೆಮಾಲು–6** ಎಂದು ಗುರುತಿಸಲಾಯಿತು.

ನಾನು ದಿಃ 16.12.2025 ರಂದು ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯಲ್ಲಿ ಇವರು ತಮ್ಮ ಕುಟುಂಬದ ಆಸ್ತಿಯನ್ನು ಇಬ್ಬರು ಮಕ್ಕಳು ಹಾಗೂ ತಂದೆ ತಾಯಿಯರಿಗೆ ಭಾಗ ಮಾಡಿರುತ್ತಾರೆ. ಈ ಜಮೀನಿನ ವಿಚಾರವಾಗಿ ಹಿಂದಿನಿಂದ ಅಣ್ಣ ತಮ್ಮಂದಿರ ಮಧ್ಯೆ ಮನಸ್ತಾಪವಿದ್ದು, ಕೋರ್ಟನಲ್ಲಿ ಸಿವಿಲ್ ಕೇಸುಗಳು ನಡೆಯುತ್ತಿರುವ ವಿಚಾರ ತಿಳಿದಿರುತ್ತೆ ಹಾಗೂ ಆಗಾಗ ಅಣ್ಣ ತಮ್ಮಂದಿರ ಗಲಾಟೆಗಳಾಗುತ್ತಿದ್ದವು.

ದಿಃ 10.02.2025 ರಂದು ಸಂಜೆ ನಾನು ಮತ್ತು ನಮ್ಮ ಊರಿನ ವಾಸಿ ಮಹೇಶ ಬಿನ್ ಮಲ್ಲಿಕಾರ್ಜುನಯ್ಯ ಇಬ್ಬರು ತೋಟದ ಕಡೆಯಿಂದ ಊರಿನ ಕಡೆಗೆ ಬರುತ್ತಿದ್ದಾಗ--------- ದಿಃ 15.08.2025 ರಂದು ಬೆಳಗ್ಗೆ ಸುಮಾರು 9.30 ಗಂಟೆಗೆ ಮೃತ ಪಟ್ಟಿದ್ದು, ಭವ್ಯರವರಿಗೆ ಆದರ್ಶ ಮತ್ತು ಪುಷ್ಪಾ ರವರು ಮೇಲ್ಕಂಡತೆ ಹೊಡೆದು ಆದ ಗಾಯಗಳ ಬಗ್ಗೆ ತುಮಕೂರು ಸಿದ್ಧಗಂಗಾ ಆಸ್ಪತ್ರೆಯಲ್ಲಿ ಮತ್ತು ತಿಪಟೂರು ಕುಮಾರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು ಸಹಃ ಭವ್ಯರವರಿಗೆ ಜ್ಞಾನ ಬಾರದೇ ಮತ್ತು ಗಲಾಟೆಯಲ್ಲಿ ಆಗಿದ್ದ ಗಾಯಗಳು ಗುಣಮುಖವಾಗದೇ ದಿಃ 15.08.2025 ರಂದು ಬೆಳಗ್ಗೆ ಸುಮಾರು 9.30 ಗಂಟೆಗೆ ಮೃತ ಪಟ್ಟಿರುತ್ತಾರೆ ಎಂದು ನಾನು

ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯನ್ನು **ನಿ.ಪಿ–17** ಎಂದು ಗುರುತಿಸಲಾಯಿತು.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯ ಆಡಿಯೋ–ವಿಡಿಯೋ ಸಿ.ಡಿಯನ್ನು ಪ್ಲೇ ಮಾಡಲು ಅನುಮತಿ ಕೋರಿದ್ದು, ಸದರಿ ಆಡಿಯೋ–ವಿಡಿಯೋ ಸಿ.ಡಿಯನ್ನು ಪ್ಲೇ ಮಾಡಲು ನ್ಯಾಯಾಲಯದಲ್ಲಿ ಯಾವುದೇ ಸಲಕರಣೆಗಳು ಇಲ್ಲದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

ಸಹಿ/-

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತಿಪಟೂರು**